**ದಿನಾಂಕಃ 06.01.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ–ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಜಿ.ಕೆ.ಎಂ. ವಕೀಲರಿಂದಃ–**

ನಿಪಿ–32 ರಿಂದ 35 ಗಳನ್ನು ನಮಗೆ ಜಮೀನು ಮಾರಿದವರ ಅಕ್ಕತಂಗಿಯರು ಭಾಗ ಕೇಳಿ ದಾವೆ ಸಲ್ಲಿಸಿ ಅದರಲ್ಲಿ ನನ್ನ ಮೇಲೆಯೂ ಸಹ ತಕರಾರು ಪತ್ರ ಸಲ್ಲಿಸಿದ ಕಾರಣ ಅವುಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಲಲಿತಮ್ಮನವರು ನನಗೆ ಮಾಡಿಕೊಟ್ಟ ಕ್ರಯದ ಕರಾರು ಪತ್ರದ ಬಗ್ಗೆ ತಮ್ಮ ಮುಖ್ಯ ವಿಚಾರಣೆಯಲ್ಲಿ ಎಲ್ಲಿಯೂ ಸಹ ಒಪ್ಪಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಲಲಿತಮ್ಮನವರು ಕ್ರಯದ ಕರಾರು ಪತ್ರದ ಬಗ್ಗೆ ಯಾವುದೇ ಅಂಶಗಳನ್ನು ಒಪ್ಪದ ಕಾರಣ ಸದರಿ ದಾಖಲೆಗಳು ಈ ದಾವೆಗೆ ಯಾವುದೇ ರೀತಿಯ ಸಂಬಂಧ ಬರುವುದಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರ ಆಸ್ತಿಯನ್ನು ಕಬಳಿಸಬೇಕು ಎಂದು ಸುಳ್ಳು ಕ್ರಯದ ಕರಾರು ಪತ್ರವನ್ನು ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.